ರೋಡಿನಲ್ಲಿ ಮೆರವಣಿಗೆ ಸಾಗುತ್ತಿತ್ತು. ಘೋಷಣೆಗಳು ಜೋರಾಗಿ ಕೇಳಿಬರುತ್ತಿದ್ದವು. ಹಿಂದಿನ ಕಿರಿದಾದ ದಾರಿಯಲ್ಲಿ ನಿಲ್ಲಿಸಿ, 'ಅದೆಲ್ಲಾ ಹೋಗಲಿರಿ. ಆಮ್ಯಾಲೆ ಹೋಗೋಣು' ಎಂದ. 'ಹಂಗ ಮಾಡರಿ. ಆದರ ಇಷ್ಟು ದಿವಸ ಬೆಳಗಾವ್ಯಾಗ ಇದ್ದರೂ ನನಗ ಈ ಅನುಭವ ಆಗಿರ್ಲಿಲ್ಲ. ಗದ್ದಲಾ ಪ್ಯಾಟ್ಯಾಗ, ಊರಾಗ ಇರತಿತ್ತು. ನಮ್ಮತನಕಾ ಬಂದಿರಲಿಲ್ಲ. ಇವತ್ತ ಗೊತ್ತಾಗಲಿಕ್ಕತ್ತದ'ಎಂದೆ. ನಸುನಗುತ್ತ ನಿರಾಳವಾಗಿ ಹಿಂದೆ ತಿರುಗಿ ಕೂತವ ತನ್ನ ನಂಬರ್ ಕೊಟ್ಟು, 'ಆಗಿನ ಮಾತು ಬ್ಯಾರೇನ ಇತ್ತರಿ. ಭಾಷಾದ ಸಲವಾಗಿ, ಧರ್ಮದ ಸಲವಾಗಿ... ಯಾತರ ಸಲವಾಗಿ ಝಗಳ ಆದರೂ ಮಂದಿ ಮನುಷ್ಯತ್ವಾ ಮರೀತಿದ್ದಿದ್ದಿಲ್ಲ. ಇವತ್ತ ಮನುಷ್ಯತ್ವ ಮರತು ಮಾತಾಡತಾರ.. ಬದುಕತಾರ. ಹಿಂಗಾಗಿ ಬಾಳ ತ್ರಾಸ ಆಗೇತ್ರಿ. ಯಾರ ಮ್ಯಾಲೂ ನಂಬಿಕಿ ಉಳೀವಲ್ದು. ಸ್ವತಾಃ ಹಡದ ಮಕ್ಕಳ್ನ ನಂಬಲಿಕ್ಕೂ ವಿಚಾರ ಮಾಡಬೇಕಾಗೇತಿ'ಎಂದ. 'ಖರೇ, ಮನಷಾ ಮಾನವೀಯತಾ ಮರತರ ಬದುಕು ಅಸಹನೀಯ ಆಗ್ತದ. ಈಗ ಹಿಂಗಾಗೇದ. ಮುಂದಿನ ಪೀಳಿಗಿ ಕಥಿ ಹೆಂಗೋ ಗೊತ್ತಿಲ್ಲ'ಎಂದೆ. ಮುಖ ಚಿಕ್ಕದು ಮಾಡಿ ಮೇಲೆ ನೋಡುತ್ತ 'ಗೊತ್ತಿಲ್ಲರಿ'ಎಂದ.

ಆಗಲೇ ಮೆರವಣಿಗೆ ಪೂರ್ತಿಯಾಗಿ ದಾಟಿ ಹೋಗಿತ್ತು. ಮೂಲೆಯಲ್ಲಿನ ಹೋಟಲ್‌ನವ ಕೊಂಚವೇ ಬಾಗಿಲು ತೆರೆದು ಒಳಗಿದ್ದವರನ್ನು ಹೊರಗೆ ಕಳಿಸುತ್ತಿದ್ದ. ನಾನು ಹಿಂದೆಲ್ಲ ಊರಿಗೆ ಹೋಗುವಾಗ ಅಲ್ಲೇ ಪಾರ್ಸೆಲ್ ಕಟ್ಟಿಸಿಕೊಳ್ಳುತ್ತಿದ್ದುದನ್ನು ಅನ್ವರ್ ಮರೆತಿರಲಿಲ್ಲ. 'ಜರಾ ತಡೀರಿ ವೈನಿ' ಎಂದವನೇ ಓಡಿದ. ಅಲ್ಲಿ ಕೇಳಿಕೊಂಡು ಬಂದು 'ಪಾರ್ಸೆಲ್ ಕೊಡ್ತಾನಂತರಿ. ಏನ ತೊಗೋತೀರಿ?' ಎಂದು ಕೇಳಿದ. 'ಎರಡು ಭಕ್ಕರಿ ಅಥವಾ ಚಪಾತಿ ಪಲ್ಯಾ... ಯಾವುದು ಸಿಗತದ ಕಟ್ಟಿಸಿಕೊಂಡು ಬರ್ರಿ' ಎಂದೆ. ಅವಸರದಿಂದಲೇ ಓಡುತ್ತಿದ್ದರೂ ಅವನ ಗತಿ ನಿಧಾನವಾಗಿತ್ತು. ಉಳಿದ ಕೆಲವೇ ಕೂದಲು ಶುಭ್ರತೆಯ ಸಂಕೇತವಾಗಿದ್ದವು. ಒಂದು ಸುತ್ತು ಮೈ ಬಂದಿತ್ತು. ಆಗ ಸದಾ ಪ್ರಫುಲ್ಲಿತನಾಗಿದ್ದವನನ್ನು ಚಿಂತೆಯ ರೇಖೆಗಳು ಆಕ್ರಮಿಸಿಕೊಂಡಿದ್ದವು. ಪಾರ್ಸೆಲ್ ನನ್ನ ಕೈಗಿಟ್ಟವನೇ, 'ಈಗ ಸ್ಟೇಷನ್‌ವಳಗ ಹೋಗಿಬಿಡೋಣು' ಎಂದು ಬರ್ರನೆ ಆಟೊ ಓಡಿಸಿದ. ಸ್ಟೇಷನ್ ಒಳಗಡೆ ಬರುವುದಕ್ಕೂ ಮತ್ತೆ ಬಾವುಟಗಳು... ಘೋಷಣೆಗಳೂ... ಜನರ ಗುಂಪುಗಳೂ ಬರಲಾರಂಭಿಸಿದ್ದವು. ಪೊಲೀಸರೂ ಅಲ್ಲಲ್ಲಿ ಬಂದೋಬಸ್ತು ಮಾಡುತ್ತ ನಿಂತಿದ್ದರು. 'ವೈನಿ... ಲಗೂ ಬರ್ರಿ' ಎಂದು ಅನ್ವರ್ ನನ್ನ ಸಾಮಾನು ಹೊತ್ತು ಬಿರಬಿರನೇ ನಡೆದ. ನಾನು ಒಳಗೆ ನಡೆದು ಪ್ಲಾಟ್‌ಫಾರ್ಮನಲ್ಲಿ ಏಳನೇ ನಂಬರ್ ಬೋಗಿ ನಿಲ್ಲುವ ಸ್ಥಳದಲ್ಲಿ ಖಾಲಿ ಬೆಂಚಿನ ಮೇಲೆ ಕುಳಿತೆ. ಅವನಾಗಲೇ ಪ್ಲಾಟ್‌ಫಾರ್ಮ ಟಿಕೆಟ್ ತೆಗೆದುಕೊಂಡು ಬಂದಿದ್ದ. ಹಿಂದಿನಂತೆಯೇ... ಕೊಂಚವೂ ವ್ಯತ್ಯಾಸವಿರಲಿಲ್ಲ. ಆಗಲೂ ಅವನು ನನ್ನನ್ನು ರೈಲಿಗೆ ಹತ್ತಿಸಿ ಸಾಮಾನು ಇಟ್ಟುಕೊಟ್ಟು, 'ಎಣಿಸಿಗೋರಿ ವೈನಿ'ಎನ್ನುತ್ತ ಹೋಗುತ್ತಿದ್ದ. 'ಇಲ್ಲೇ ಕೂಡ ಬರ್ರಿ ಅನ್ವರ್'ಎಂದು ಕರೆದೆ. 'ಇರ್ಲಿ ಬಿಡರಿ'ಎಂದು ಸಂಕೋಚಗೊಂಡವ ಒತ್ತಾಯಿಸಿದ ಮೇಲೆ ಕುಳಿತ.

'ಮತ್ತ ಹ್ಯಾಂಗಿದ್ದೀರಿ? ಹೆಂಡತಿ, ಮಕ್ಕಳು ಹ್ಯಾಂಗಿದ್ದಾರ? ಮಕ್ಕಳು ದೊಡ್ಡವರಾಗಿರಬೇಕು. ಈಗ ಏನ ಮಾಡ್ಲಿಕ್ಕತ್ತಾರ?' ಎಂದು ಎಲ್ಲಾ ಪ್ರಶ್ನೆಗಳನ್ನು ಒಟ್ಟಿಗೆ ಕೇಳಿದೆ. 'ಎಲ್ಲಾ ಆರಾಮ ನಡದದರಿ. ತಾಯಿ ತೀರಿಕೊಂಡರು. ತಂಗಿ ಗಂಡನ ಮನ್ಯಾಗ ಆರಾಮ ಅದಾಳು. ಹೆಣಮಗಳ್ನ ಲಗನಾ ಮಾಡಿ ಕೊಟ್ಟೆದೇವಿ. ಅಕೀನೂ ಆರಾಮ ಅದಾಳು. ಗಂಡಮಗಾ ರಿಕ್ಷಾ ಓಡಸತಾನ. ಮತ್ತ ಏನೇನೋ ಕೆಲಸಾ ಮಾಡತಾನ. ಎಲ್ಲಾ ಆರಾಮ ನಡದೇತ್ರಿ'ಎನ್ನುತ್ತ ದೇಶಾವರಿ ನಗೆ ನಕ್ಕ. 'ನಿಮ್ಮ ಕೆಲಸ ಹೆಂಗ ನಡದದ?'ಎಂದು ಕೇಳಿದೆ. 'ಈಗ ರಿಕ್ಷಾ ಹೊಡ್ಯೋದ ಬಿಟ್ಟಬಿಟ್ಟೇನ್ರಿ. ನಡಕ ಹಾರ್ಟಿಂದ ತ್ರಾಸ ಆಗಿ ಆಪರೇಷನ್ ಮಾಡಿದರು. ಇಷ್ಟು ವರ್ಷ ಹೊಡದದ್ದ ಸಾಕು ಅಂತ ಮನ್ಯಾಗ ಸುರು ಮಾಡ್ಕೊಂಡ್ರಾ. ನಾನೂ ಬಿಟ್ಟೆ. ಹಿಂಗ ಯಾವಾಗರೆ ಅರ್ಜೆಂಟ್ ಇದ್ದಾಗ ಓಡಸ್ತೇನ್ರಿ. ನೀವ ನನಗ ಭಾಳ ಬೇಕಾದಾವರು. ನಿಮ್ಮನ್ನ ಆರಾಮ್‌ಶೀರ ಕಳಸಾಕ ಗಾಡಿ ತಗದೆ ನೋಡ್ರಿ' ಎಂದ. ಹೌದು, ನಮ್ಮ ನಡುವೆ ಇದ್ದ ಅನುಬಂಧವೇ ಅಂಥದ್ದು. ನಾವು ಮೇರೆಗಳ ಮೀರಿದವರು. ಪರಸ್ಪರ ನಂಬಿಕೆಯ ತಳಹದಿಯ ಮೇಲೆ ಕಟ್ಟಿದ ಸೌಧ. ಹೊರಗೆ ಘೋಷಣೆಗಳು ಉಕ್ಕೇರುತ್ತಿದ್ದಂತೆ ಸ್ಟೇಷನ್ ಒಳಗಡೆಯೂ ಪೊಲೀಸರು ಬಂದು ಅಲ್ಲಲ್ಲಿ ನಿಂತು ಪಹರೆ ಕಾರ್ಯ ನಡೆಸತೊಡಗಿದರು. ನನ್ನೆದೆಯಲ್ಲಿ ಮತ್ತೆ ಅವಲಕ್ಕಿ